# ಗಂಡ

ಗಂಡನೆಂದರೆ ಬಲಾಢ್ಯನೂ ಶೂರನೂ ಶಕ್ತಿ ಸಂಪನ್ಮೂಲ ಉಳ್ಳವನೂ ಆದ ವ್ಯಕ್ತಿ ಎಂಬ ಅರ್ಥವಿದೆ. ಕಾಲಾಂತರದಲ್ಲಿ ಇದಕ್ಕೆ ಒಡೆಯ, ಯಜಮಾನ ಎಂಬ ಅರ್ಥಗಳು ಸೇರಿಕೊಂಡಿವೆ. ಅಂದರೆ ಗಂಡನೆಂಬ ಶಬ್ದಕ್ಕೆ ಲಿಂಗಾಧಾರಿತ ಅರ್ಥವನ್ನೂ ಇಟ್ಟು ನೋಡಿದರೆ ಇಲ್ಲಿ ಒಳಿತು ಅನ್ನಿಸುತ್ತದೆ. ಬಲಾಢ್ಯಳೂ ಶೂರಳೂ ಶಕ್ತಿ ಸಂಪನ್ಮೂಲಳೂ ಆಗಿರುವ ಸ್ತ್ರೀಯೂ ಕೂಡ ಗಂಡುತನವನ್ನು ಉಳ್ಳವಳಾಗಿರುವ ಸಾಧ್ಯತೆಯಿದೆ. ಚರಿತ್ರೆಯಲ್ಲಿ ಪುರುಷನಂತೆ ಅಥವಾ ಅವನಿಗಿಂತ ಮಿಗಿಲಾಗಿ ಗಂಡುತನವನ್ನು ಮೆರೆದ ಅನೇಕ ಸ್ತ್ರೀಯರು ನಮಗೆ ಸಿಗುತ್ತಾರೆ. ಆದರೆ ಪುರುಷ ಪ್ರಧಾನ ವ್ಯವಸ್ಥೆ ಪ್ರಾರಂಭವಾದ ನಂತರ ಗಂಡುತನಕ್ಕಿರುವ ಗುಣಲಕ್ಷಣಗಳು ಪುರುಷನಲ್ಲಿ ಮಾತ್ರ ಗೋಚರಿಸುತ್ತವೆ ಅಥವಾ ಇವೆ ಎಂದು ಭ್ರಮಿಸಿ ಗಂಡುತನವನ್ನು ಪುರುಷನಿಗೆ ಅನ್ವಯಿಸಿ ಸೀಮಿತಗೊಳಿಸಲಾಗಿದೆ. ಗಂಡನೆಂಬ ಪದವನ್ನು ಪುರುಷನಿಗೇ ಅನ್ವಯಿಸಿ ಸೀಮಿತಗೊಳಿಸಲಾಗಿದೆ.

ಗಂಡ ಎಂಬ ಶಬ್ದಕ್ಕೆ ಇನ್ನೂ ಇಂದು ಅರ್ಥವಿದೆ. ಏನು ಗಂಡ ಕಾದಿದೆಯೋ? ಎಂಬ ಮಾತಿನಲ್ಲಿ ಅಪಾಯ, ತೊಂದರೆಗಳ ನಿರೀಕ್ಷೆಯ ದಿಗಿಲು ಕಾಣುತ್ತದೆ. ಅಂದರೆ ಗಂಡನೆಂದರೆ ಅಪಾಯ, ಆಪತ್ತು, ಕುರು, ರೋಗ ರುಜಿನ ಎಂಬೆಲ್ಲಾ ಅರ್ಥಗಳಿವೆಯೆಂಬುದನ್ನು ತಿಳಿದುಕೊಂಡು, ಗಂಡ ಎಂಬ ಪದಕ್ಕೆ ಈಗ ಹೆಚ್ಚಾಗಿ ಬಳಸುತ್ತಿರುವ ಪತಿ/ ಹಸ್ಬೆಂಡ್ ಎಂಬ ಪದವನ್ನು ವ್ಯಾಖ್ಯಾನಿಸಬಹುದು. ಸ್ತ್ರೀಯನ್ನು ಪತ್ನಿಯನ್ನಾಗಿ ಸ್ವೀಕರಿಸಿ, ಅವಳನ್ನು ಸಂತಾನಾಭಿವೃದ್ಧಿಯ ಸಾಧನ ಮತ್ತು ಭೋಗಬಾಜನಳನ್ನಾಗಿ ಮಾಡಿಕೊಂಡ ಪುರುಷ, ಅವಳನ್ನು ವ್ಯಕ್ತಿತ್ವ ರಹಿತಳನ್ನಾಗಿ ಮಾಡಿ, ಅವಳ ಆಸೆ ಕನಸು ಮತ್ತು ಸೃಷ್ಟಿಶೀಲ ನಡೆಯನ್ನು ಕುಂಠಿತಗೊಳಿಸಿ ಗುಲಾಮಳನ್ನಾಗಿ ಮಾಡಿಕೊಂಡನು. ಇದು ಜಗತ್ತಿನ ಎಲ್ಲೆಡೆ ಚರಿತ್ರೆಯಲ್ಲಿ ಕಂಡು ಬರುವ ಸತ್ಯ. ಚರಿತ್ರೆಯಲ್ಲಿ ಪುರುಷ ನಿರಂತರವಾಗಿ ಸ್ತ್ರೀ ಮೇಲೆ ನಡೆಸುತ್ತ ಬಂದಿರುವ ಶೋಷಣೆಯ ಹಿನ್ನೆಲೆಯಲ್ಲಿ– ಸ್ತ್ರೀ ದೃಷ್ಟಿಯಿಂದ ನೋಡಿದಾಗ ಗಂಡ ಅಪಾಯ, ಆಪತ್ತು ಅಥವಾ ದೇಹಕ್ಕೆ ಅಂಟಿಕೊಂಡ ಕುರುವೆಂದೇ ತಿಳಿಯಬೇಕು. ಈ ಕಾರಣದಿಂದ ಸ್ತ್ರೀಗೆ ಪತಿಯೆಂದರೆ ಒಂದರ್ಥದಲ್ಲಿ ಗಂಡ ಅಪಾಯ, ಆಪತ್ತು– ಎಂದೇ ಬಗೆಯಬೇಕು!

ಆಧುನಿಕ ಕಾಲದಲ್ಲಿ ಸ್ತ್ರೀಪ್ರಪಂಚದ ವಿಕಸನಕ್ಕೆ ಮನೆ ಶಾಲೆ ಕಚೇರಿಗಳಲ್ಲಿ ಹೆಜ್ಜೆ ಹೆಜ್ಜೆಗೂ ನಾನಾ ಮಾನಸಿಕ ದೈಹಿಕ ಮತ್ತು ಆರ್ಥಿಕ ಗಂಡಾಂತರಗಳನ್ನು ತಂದೊಡ್ಡುವ ತಡೆಗೋಡೆಯಾಗಿ ಪುರುಷ ವ್ಯವಹರಿಸುತ್ತಿದ್ದಾನೆ ಎಂಬ ಸತ್ಯವನ್ನು ಅರ್ಥಮಾಡಿಕೊಂಡಾಗ ಗಂಡ ಎಂಬ ಶಬ್ದಕ್ಕಿರುವ ಅರ್ಥ ಅರಿವಿಗೆ ಬರುತ್ತದೆ. ಗಂಡ ಎಂಬ ಪದಕ್ಕೆ ಇಂಗ್ಲಿಷ್ ಶಬ್ದಕೋಶವೊಂದು ಎರಡು ಭಿನ್ನವಾದ, ವಿರುದ್ಧಾರ್ಥ ನೀಡುತ್ತದೆ. ಗಂಡ ಸಮರ್ಥ ನಿರ್ವಾಹಕ ಮತ್ತು ಗಂಡ ಅಸಮರ್ಥ ನಿರ್ವಾಹಕ– ಎಂಬ ಎರಡು ಅರ್ಥಗಳೇ ಅವು. ಈ ನೆಲೆಯಲ್ಲೂ ನಾವು ಸ್ತ್ರೀಪುರುಷ ಸಾಮರ್ಥ್ಯತೆಯನ್ನು ಕುರಿತು ಚಿಂತಿಸಬಹುದು. ಆಧುನಿಕ ಸಮಾಜಶಾಸ್ತ್ರಜ್ಞರು ಮತ್ತು ವ್ಯವಹಾರ ನಿರ್ವಹಣಾ ಶಾಸ್ತ್ರಜ್ಞರು ಗುರುತಿಸಿರುವಂತೆ ಪುರುಷರಿಗಿಂತ ಸ್ತ್ರೀಯರು ಉತ್ತಮ ನಿರ್ವಹಣಾ ಕೌಶಲ್ಯ ಉಳ್ಳವರು. ಅತ್ಯಂತ ಉತ್ತಮ ನಿರ್ವಹಣಾ ಶಕ್ತಿಯಿರುವ ಪುರುಷರಿಗಿಂತ ಅತ್ಯಂತ ಕಳಪೆ ನಿರ್ವಹಣಾ ಶಕ್ತಿಯಿರುವ ಪುರುಷರು ಅಧಿಕ. ಆದರೆ ಸಾಧಾರಣ ಮಟ್ಟದಿಂದ ಅತ್ಯುತ್ತಮ ನಿರ್ವಹಣಾ ಸಾಮರ್ಥ್ಯವಿರುವ ಮಹಿಳೆಯರು ಜಗತ್ತಿನ ಮನೆ ಮನೆಯಲ್ಲೂ ಸಿಗುತ್ತಾರೆ. ಏಕೆಂದರೆ ಸ್ತ್ರೀಗೆ ನಿರ್ವಹಣೆ ಎಂಬುದು ಕೌಟುಂಬಿಕ ಕಾರಣಗಳಿಂದಾಗಿ ಅವಳಲ್ಲಿ ವಂಶವಾಹಿ ರೂಪದಲ್ಲೇ ತರಬೇತಿ ಪಡೆದುದಾಗಿರುತ್ತದೆ.

ಸ್ತ್ರೀಯ ಈ ಬಗೆಯ ನಿರ್ವಹಣಾ ಸಾಮರ್ಥ್ಯ– ಕೌಶಲ್ಯಕ್ಕೆ ಒಂದು ರೂಪದಲ್ಲಿ ಪುರುಷನೇ ಕಾರಣನೆನ್ನಬಹುದು. ಹೆಂಡತಿ ಎನ್ನುವವಳು ದ್ವಿತೀಯೆ ಎಂದು ಪರಿಗಣಿಸಿ, ಅವಳು ನಿರ್ದಿಷ್ಟ ಕೆಲಸದಲ್ಲಿ ತೊಡಗಿರುವವಳು ಎಂದು ಒಂದು ಜಾಗಕ್ಕೆ ಅಥವಾ ಕೆಲಸಕ್ಕೆ ಕಟ್ಟಿಹಾಕಿರುವುದು ಕೂಡ ಕಾರಣವಾಗಿದೆ. ಅವಳನ್ನು ಮುಖ್ಯವಾಗಿ ಗೃಹಕೃತ್ಯಕ್ಕೆ ಸೀಮಿತಗೊಳಿಸಿ ಬಂಧಿಸಿದ್ದರಿಂದ ಅವಳು ಅನಿವಾರ್ಯವಾಗಿ ಅದರ ನಿರ್ವಹಣೆಯಲ್ಲಿ ಕೌಶಲ್ಯವನ್ನು ವೃದ್ಧಿಸಿಕೊಂಡಳು.

ಪ್ರಕೃತಿ ನಿಯಮದಲ್ಲಿ ಸ್ತ್ರೀಪುರುಷರಿಬ್ಬರೂ ಸಮಾನರು. ಸೃಷ್ಟಿಕ್ರಿಯೆ ಮತ್ತು ಅದರ ಚಲನೆಯಲ್ಲಿ ಅವರ ಪಾಲು ಪರಸ್ಪರ ಪೂರಕ. ಗಂಡ ಹೆಂಡತಿ ಎಂಬ ಪರಿಕಲ್ಪನೆಗಳು ಅನಂತರ ಸೃಷ್ಟಿಗೊಂಡ ಅಸಮಾನ ಸಾಮಾಜಿಕ ಪದ್ಧತಿಗಳು.

■ **ಶಿಕಾಕು**

## ಮಾತೇ ಮುತ್ತು

★ ಕೃಷಿಕರು, ಕಾರ್ಮಿಕರು ಕೆಲಸ ಮಾಡುವುದನ್ನು ಬಿಟ್ಟರೆ ಇಡೀ ದೇಶವೇ ಚಲನ ರಹಿತವಾಗುತ್ತದೆ. ಆದರೆ ಶೇಕಡ ಹತ್ತರಷ್ಟಿರುವ ದೊಡ್ಡ ಜನ ತಮ್ಮ ವ್ಯಾಪಾರ, ವ್ಯವಹಾರವನ್ನು ಬಿಟ್ಟರೂ ದೇಶಕ್ಕೇನೂ ಆಗುವುದಿಲ್ಲ.

–ದೇವರಾಜ ಅರಸು

★ ನಿನ್ನ ಪ್ರವೃತ್ತಿಗೆ ಅನುಸಾರವಾಗಿ ಮುನ್ನಡೆ. ನಿನ್ನ ಬುದ್ಧಿಯಂತೆ ನಡೆ. ಪ್ರಕೃತಿ ನಿನ್ನಿಂದ ಏನು ಬಯಸುತ್ತದೆ ಅದನ್ನು ಮಾಡು. ಇದರಿಂದ ನಿನಗೆ ಜಯ ಖಂಡಿತ. ಇದಕ್ಕೆ ವಿರುದ್ಧವಾಗಿ ನೀನು ಏನನ್ನಾದರೂ ಮಾಡಲು ಹೊರಟರೆ ನೀನು ಏನನ್ನೂ ಸಾಧಿಸಲಾರೆ.

–ಸಿಡ್ನಿ ಸ್ಮಿತ್

★ ನನ್ನ ಶತ್ರುಗಳನ್ನು ಮಿತ್ರರನ್ನಾಗಿ ಮಾಡಿದಾಗ, ನಾನು ಶತ್ರುಗಳನ್ನು ನಾಶಪಡಿಸಿದಂತೆ. ಆದ್ದರಿಂದ ಸೋಲು, ಗೆಲುವು ಬಹಳಷ್ಟು ನಮ್ಮ ಕೈಯಲ್ಲೇ ಇರುತ್ತದೆ.

–ಅಬ್ರಹಾಂ ಲಿಂಕನ್

★ ವ್ಯವಹಾರದಿಂದ ಬರುವ ಲಾಭ, ದಾನದಿಂದ ಬರುವ ಕೀರ್ತಿ –ಎರಡನ್ನೂ ಒಮ್ಮೆಗೇ ಅಪೇಕ್ಷಿಸಬಾರದು.

–ಮದನಮೋಹನ ಮಾಳವೀಯ

★ ದುಷ್ಟರು ಬೇರೆಯವರ ಕಾರ್ಯಕ್ಕೆ ವಿಘ್ನ ಮಾಡುತ್ತಾರೆ. ಅದನ್ನು ಸರಿಪಡಿಸುವ ಪ್ರಯತ್ನ ಮಾಡುವುದಿಲ್ಲ. ಬಿರುಗಾಳಿ ಮರವನ್ನು ಬುಡಸಹಿತ ಉರುಳಿಸುತ್ತದೆ. ಅದನ್ನು ಮತ್ತೆ ನಿಲ್ಲಿಸಲಾರದು.

–ಪಂಚತಂತ್ರ

★ ಎಲೈ ಮನುಷ್ಯ! ನಿನ್ನನ್ನು ಯಾರಾದರೂ ಜಾರಿ ಬೀಳಿಸುವ ಪ್ರಯತ್ನ ಮಾಡಿದರೆ ಎಚ್ಚರದಿಂದಿರು, ನೀನು ಜಾರಿ ಬೀಳಬೇಡ.

–ವಿನೋಬಾ ಭಾವೆ

★ ನಾನು ಪರ್ವತವನ್ನೂ ಅಲುಗಾಡಿಸಬಲ್ಲೆ ಎಂಬ ನಂಬಿಕೆ ನನಗಿದೆ. ಆದರೆ ದಯೆ ಇಲ್ಲದಿದ್ದರೆ ನಾನು ಏನೂ ಅಲ್ಲ. ನನ್ನಿಂದ ಏನೂ ಆಗುವುದಿಲ್ಲ.

–ಬೈಬಲ್

★ ತಂದೆ ತಾಯಿಗಳು ಮಕ್ಕಳನ್ನು ಸಲಹುವುದಕ್ಕಾಗಿ ಎಷ್ಟು ಕಷ್ಟಪಡುತ್ತಾರೆಂಬುದನ್ನು ಗಮನಿಸಿದರೆ, ಯಾವ ಮಗನಿಗೂ ತಾಯಿ ತಂದೆಗಳ ಉಪಕಾರವನ್ನು ತೀರಿಸಲು ಸಾಧ್ಯವಾಗದು.

–ರಾಮಾಯಣ

★ ದುಡಿದು ಉಣ್ಣಬೇಕು, ತಿಳಿದು ಹೇಳಬೇಕು.

–ತುಳು ಗಾದೆ

★ ಐಶ್ವರ್ಯ ಮತ್ತೊಬ್ಬನನ್ನು ಆಶ್ರಯಿಸುತ್ತದೆ. ಭೂಮಿ ಒಬ್ಬನಿಂದ ಒಬ್ಬನನ್ನು ಸೇರುತ್ತದೆ. ಆದರೆ ಮನುಷ್ಯರಿಗೆ ಕೀರ್ತಿ ಎಂಬುದು ಒಂದೇ. ಮತ್ತೊಬ್ಬರನ್ನು ಸೇರದ ಪತಿವ್ರತೆಯಂತೆ ನಿಷ್ಠೆ ಹೊಂದಿರುತ್ತದೆ.

–ಸುಭಾಷಿತ

★ ವ್ಯಥೆ ಪಡುವುದು ಸರಿಯಲ್ಲ– ಎಂಬುದೇನೋ ಸರಿ. ಆದರೆ ವ್ಯಥೆ ತಪ್ಪಿದ್ದಲ್ಲ. ಗೌರವ ಲಭಿಸದ ದಿನ ಸಂತೋಷಪಟ್ಟಂತೆ ಅವಮರ್ಯಾದೆ ಆದ ದಿನ ದುಃಖ ಪಡಬೇಕು. ಅಂದು ನಗೆ ಹೇಗೆಯೋ, ಇಂದು ಅಳು ಹಾಗೆಯೇ ಸಹಜ. ಎರಡರಿಂದಲೂ ಆಗಬೇಕಾದ್ದೇನೋ ಇದೆ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಗುಲಾಮಗಿರಿ ಗೌರವವನ್ನು ಹಾಳು ಮಾಡುವಂತೆ, ಚಂದ್ರನ ಬೆಳಕು ಕತ್ತಲನ್ನು ಹರಿಸುವಂತೆ, ವಯಸ್ಸು ರೂಪವನ್ನು ಅಪಹರಿಸುವಂತೆ, ಧ್ಯಾನ ಪಾಪವನ್ನು ಪರಿಹರಿಸುವಂತೆ– ಬಡತನ ನೂರು ಸದ್ಗುಣಗಳನ್ನೂ ಅಪಹರಿಸುತ್ತದೆ.

–ಹಿತೋಪದೇಶ